**ಸಿವಿಲ್ ನ್ಯಾಯಾಧೀಶರ ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ ಔರಾದ(ಬಿ)**
**ಸಿ.ಸಿ. ನಂ. 334/2017**

**ಚಾಸಾ–1 ಪ್ರಾಸಾ–1**

ದಿನಾಂಕ **21–11–2022** ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

| | |
|---|---|
| ಹೆಸರು | ಃ ವಿಜಯಕುಮಾರ ಪಾಟೀಲ |
| ತಂದೆಯ ಹೆಸರು | ಃ ಶ್ರೀಪತರಾವ |
| ವಯಸ್ಸು | ಃ 71 ವರ್ಷ |
| ಉದ್ಯೋಗ | ಃ ಒಕ್ಕಲುತನ |
| ವಾಸ ಸ್ಥಳ | ಃ ದಾಬಕಾ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ–**

1. ಆರೋಪಿತರ ಪರಿಚಯ ಇರುತ್ತದೆ. ನನ್ನ ಜಮೀನು ದಾಬಕಾ–ಸಿ ಯಲ್ಲಿ ಇರುತ್ತದೆ. ಅದರ ಸ.ನಂ.14 ಇದ್ದು, 2 ಎಕರೆ 2 ಗುಂಟೆ ಇರುತ್ತದೆ. ರಸ್ತೆಯ ಜಗಳವಿತ್ತು. ಪೋಲಿಸರು ಒಂದು ದಾಖಲಾತಿ ಮೇಲೆ ಸಹಿ ಮಾಡು ಅಂತಾ ಅಂದಿದ್ದರಿಂದ ನಾನು ಸಹಿ ಮಾಡಿರುತ್ತೆನೆ. ಅದು ಕನ್ನಡದಲ್ಲಿ ಬರೆದಿದ್ದರಿಂದ ಏನು ಬರೆದಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿತರು ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವದೇ ಸ್ಥಳ ಪಂಚನಾಮೆ ಮಾಡಿಲ್ಲ ಮತ್ತು ಮರು ಹೇಳಿಕೆ ಪಡೆದಿಲ್ಲ. ಸಾಕ್ಷಿಯು ದೂರಿನಲ್ಲಿದ್ದ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ–1 ಎಂದು ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ನಿ.ಪಿ–1 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಸಾಕ್ಷಿಯು ತನ್ನ ಹೊಲದ ಪಹಣಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಗೆ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಬೇಕು ಎಂದು ಕೇಳಿಕೊಂಡಿದ್ದರಿಂದ ಅನುಮತಿಸಲಾಗಿದೆ.)

**ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ–**

1. ದೂರು ಕೊಡುವ ಎರಡು ವರ್ಷಗಳ ಪೂರ್ವದಲ್ಲಿ ಆರೋಪಿತರೆಲ್ಲರು ಕೂಡಿಕೊಂಡು ಒಳಸಂಚು ನಡೆಸಿ ನಮ್ಮ ಗ್ರಾಮ ಪಂಚಾಯತ್ ದಾಬಕಾ–ಸಿ ಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ನಮ್ಮ ಜಮೀನು ಸ.ನಂ.14 ರಲ್ಲಿ ನನ್ನ ಹೆಂಡತಿ ಮೀನಾ ರವರ ಹೆಸರಿನಲ್ಲಿದ್ದ ಜಮೀನಿನಲ್ಲಿ ಬಾವಿ ತೆಗೆದಿದ್ದೆವೆ ಅಂತಾ ಹಣ ದುರುಪಯೋಗ ಮಾಡಿದ ಬಗ್ಗೆ ನನಗೆ ಗಮನಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ಸದರಿ ಕೆಲಸಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ನಾನು ಪಡೆದುಕೊಂಡು ಸಂಬಂಧಪಟ್ಟ ಅಧಿಕಾರಿಗಳಿಗೆ ಟಪಾಲು ಮೂಲಕ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

2. ಸ್ಥಳ ಪರಿಶೀಲನೆ ಕುರಿತು ನಂದುಕುಮಾರ ರವರು ಬಂದು ಪರಿಶೀಲನೆ ನಡೆಸಿ ದುರ್ಬಳಕೆ ಮಾಡಿದ ಸಂಬಂಧಪಟ್ಟ ತಪ್ಪಿಸ್ಥರಿಂದ ಹಣವನ್ನು ವಸೂಲಿ ಮಾಡಬೇಕೆಂದು ವರದಿ ಸಲ್ಲಿಸಿದ್ದರು ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಸದರಿ ವಸೂಲಾತಿಯ ಆದೇಶ ಆಗಿದ ತಕ್ಷಣ ಆರೋಪಿತರೆಲ್ಲರು ದಾಬಕಾದ ಮಾಜಿ ಮಹಿಳೆ ಅಧ್ಯಕ್ಷರಿಗೆ ಮುಂದೆ ಮಾಡಿ ನನ್ನ ವಿರುದ್ಧ ಈ ಪ್ರಕರಣ ರಾಜಿ ಆಗಲು ಅಟ್ರಾಸಿಟಿ ಪ್ರಕರಣ ದಾಖಲು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

3. ದಿನಾಂಕ 29–11–2016 ರಂದು ನಾನು ಪೋಲಿಸರಿಗೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. 2011–12 ರಲ್ಲಿ ಮಹಾತ್ಮಾ ಗಾಂಧಿ ನರೇಗಾ ಯೋಜನೆ ಅಡಿಯಲ್ಲಿ ದಾಬಕಾ–ಸಿ ಗ್ರಾಮ ಪಂಚಾಯತ್ ಅಡಿಯಲ್ಲಿ ಬರುವ ನಮ್ಮ ಹೊಲ ಸ.ನಂ.14 ರಲ್ಲಿ ದಂಡೆಗೆ ಹತ್ತಿರ ನಾಲಾದಲ್ಲಿ ತೆರೆದ ಬಾವಿ ತೆಗೆಯಿಸಿದ್ದು ನಮ್ಮ ಹೊಲದಲ್ಲಿ ಅಗೆಯದೇ ಆರೋಪಿ ನಂ.1 ರಿಂದ 4 ರವರೂ ಕೂಡಿಕೊಂಡು ರೂ.1,21,910/– ಗಳನ್ನು ತಮ್ಮ ಸ್ವಂತಕ್ಕೆ ಬಳಸಿಕೊಂಡು

ಸರ್ಕಾರಕ್ಕೆ ಹಾಗೂ ನನಗೆ ಮೋಸ ಮಾಡಿದ ಬಗ್ಗೆ ಮರು ಹೇಳಿಕೆ ನೀಡಿರುತ್ತೆನೆ ಎಂದರೆ ಸರಿಯಲ್ಲ. ಮರು ಹೇಳಿಕೆಯನ್ನು ನಿಪಿ–3 ಎಂದು ಗುರುತಿಸಲಾಯಿತು.

4. ದಿನಾಂಕ 16–07–2014 ರಂದು ನಾನು ತೋರಿಸಿದ ನಮ್ಮ ಜಮೀನ ಸ.ನಂ.14 ರಲ್ಲಿ ಪೋಲಿಸರು ಪಂಚರ ಸಮಕ್ಷಮ ಮುಂಜಾನೆ 10.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ ಸ್ಥಳ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಈಗ ಆರೋಪಿತರ ಜೊತೆ ರಾಜಿ ಆಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ. ಬಿ. ಸಿ. ಕೆ. ವಕೀಲರಿಂದಃ–**

1. ನಾಲಾ ನನ್ನ ಹೊಲ ಸ.ನಂ.14 ರಲ್ಲಿ ಇದೆ ಎಂದರೆ ಸರಿ. ನರೇಗಾ ಯೋಜನೆಯಲ್ಲಿ ಕಾರ್ಮಿಕರು ನನ್ನ ಜಮೀನಿನಲ್ಲಿ ಬಾವಿ ತೆಗೆದಿದ್ದಾರೆ ಎಂದರೆ ಸರಿ. ಬಾವಿ ತೆಗೆಯುವಾಗ ನಾನು ಹಾಜರಿದ್ದೆನು ಎಂದರೆ ಸರಿ. ಕಾರ್ಮಿಕರಿಗೆ ವೇತನ ಅಂಚೆ ಇಲಾಖೆಯಿಂದ ಕೊಡುತ್ತಿದ್ದರು ಎಂದರೆ ಸರಿ. ನಂದಕುಮಾರ ರವರು ಜಿಲ್ಲಾ ಪಂಚಾಯಿತಿಯಿಂದ ಬಂದಿದ್ದರು ಮತ್ತು ಅವರು ಯಾವದೇ ತಪಾಸಣೆ ಅಥವಾ ಪರಿಶೀಲನೆ ಮಾಡಿಲ್ಲ ಎಂದರೆ ಸರಿ. ನಂದಕುಮಾರ ರವರು ಸಹಿ ಮಾಡುವುದು ಇದೆ ಎಂದು ನನಗೆ ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ನಾನು ಬಿಳಿ ಖಾಲಿ ಪೇಪರ್ ಮೇಲೆ ಸಹಿ ಮಾಡಿದ್ದೇನೆ ಎಂದರೆ ಸರಿ. ಸದರಿ ದಾಖಲಾತಿಯಲ್ಲಿ ಏನು ಬರೆದಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಕಾರಣ ನನಗೆ ಕನ್ನಡ ಬರುವುದಿಲ್ಲ.

**<u>ಮರು ವಿಚಾರಣೆ : ಇಲ್ಲ.</u>**

ಆರೋಪಿತರ ಪರ ವಕೀಲರು ಪಾಟೀ ಸವಾಲುವೆಂದು ನುಡಿದಿರುತ್ತಾರೆ.

(ಸಾಕ್ಷಿಯು ಮರಾಠಿಯಲ್ಲಿ ಹೇಳಿದ್ದನ್ನು ಅದನ್ನು ಯಥಾವತ್ತಾಗಿ ಕನ್ನದಲ್ಲಿ ಅನುವಾದಿಸಿ ನನ್ನ ಉಕ್ತಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಗ್ಪಣಕೀಕೃತಗೊಳಿಸಲಾಯಿತು)

ಓ. ಹೆ. ಕೆ. ಸರಿ ಇದೆ.

ಪ್ರ.ದ.ನ್ಯಾ.ದಂ.ಗಳು, ಔರಾ ದ್.